# ಮನವಿ ಪತ್ರ

ಗೆ,

ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ, ವಿಧಾನಸೌಧ
ಬೆಂಗಳೂರು ಇವರಿಗೆ

ತಹಸೀಲ್ದಾರರು ಕುಷ್ಟಗಿ ಇವರ ಮುಖಾಂತರ

ವಿಷಯ: ಕುಷ್ಟಗಿ ತಾಲೂಕು ಹಿರೇಮನ್ನಾಪೂರ ಗ್ರಾಮದ ವಿವಿಧ ಬೇಡಿಕೆಗಳನ್ನು ಈಡೇರಿಸುವ ಕುರಿತು.

ಮಾನ್ಯರೇ,

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕರವೇ ತಾಲೂಕು ಘಟಕ ಮತ್ತು ಹಿರೇಮನ್ನಾಪೂರ ಗ್ರಾಮ ಘಟಕಗಳ ಸಹಯೋಗದಲ್ಲಿ ಇಂದು ದಿನಾಂಕ:02-07-2024 ರಂದು ಹಿರೇಮನ್ನಾಪೂರ ಗ್ರಾಮದ ಸಾರ್ವಜನಿಕ ಆಸ್ಪತ್ರೆಯಿಂದ ಕಾಲ್ನಡಿಗೆ ಜಾಥಾ ಮುಖಾಂತರ  ಬಸ್‌ನಿಲ್ದಾಣದ ಬಳಿ ಪ್ರತಿಭಟನೆಯನ್ನು ಹಮ್ಮಿಕೊಂಡು ಈ ಕೆಳಕಂಡ ಬೇಡಿಕೆಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದು, ತಾವು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ಮಾಡಿ ಕೂಡಲೇ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಬೇಕು. ಇಲ್ಲವಾದಲ್ಲಿ ನಾವು ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಿದ್ದೇವೆ ಎಂದು ಈ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇವೆ.

**ಬೇಡಿಕೆಗಳು:**

**ಕಂದಾಯ ಇಲಾಖೆ :**

1) ಹಿರೇಮನ್ನಾಪೂರ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ಕಂದಾಯ ಹೋಬಳಿಯನ್ನು ರಚಿಸುವುದು.
2) ಗ್ರಾಮ ವ್ಯಾಪ್ತಿಯಲ್ಲಿ ಸೋಲಾರ್ ಮತ್ತು ಪವನ ವಿದ್ಯುತ್ ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದು, ಅವರ ಸಹಾಯವನ್ನು ಪಡೆದು ಗ್ರಾಮದ ಮುಖ್ಯರಸ್ತೆಗೆ ಬೀದಿ ದೀಪಗಳನ್ನು ಅಳವಡಿಸಬೇಕು. ಮತ್ತು ಸ್ಥಳೀಯರಿಗೆ ಉದ್ಯೋಗ ನೀಡಬೇಕು.
3) ಕುಷ್ಟಗಿ-ಸಿಂಧನೂರು ರಸ್ತೆ ಹದಗೆಟ್ಟಿದ್ದು, ಅಭಿವೃದ್ಧಿ ಪಡಿಸಬೇಕು.

**ತಾಲೂಕು ಪಂಚಾಯಿತಿ ಕುಷ್ಟಗಿ :**

1) ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಇಲ್ಲದ್ದಕ್ಕೆ, ವಿವಿಧ ಕಡೆ ರಸ್ತೆಗೆ ತ್ಯಾಜ್ಯ ನೀರು ಹರಿದು ಬರುತ್ತಿದ್ದು, ಇದರಿಂದಾಗಿ ಗ್ರಾಮದಲ್ಲಿ ಸ್ವಚ್ಛತೆ ಮಾಯವಾಗಿದೆ. ಈ ಬಗ್ಗೆ ಗ್ರಾಮಪಂಚಾಯತಿಯವರು ಇದುವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.
2) ಗ್ರಾಮಪಂಚಾಯತಿ ಅಧೀನದಲ್ಲಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಗ್ರಂಥಾಲಯವು ಪ್ರಸ್ತುತ ಹಳೆಯ ಕಟ್ಟಡದಲ್ಲಿ ಇದ್ದು, ಮಳೆ ಬಂದಾಗ ಕಟ್ಟಡ ಸೋರುತ್ತಿದ್ದು ಓದುಗರಿಗೆ ತೊಂದರೆಯಾಗಿದೆ ಮತ್ತು ಪುಸ್ತಕಗಳು ಮಳೆನೀರಿನಿಂದ ತೊಯ್ದು ಹಾಳಾಗುತ್ತಿವೆ. ಸದರಿ ಗ್ರಂಥಾಲಯವನ್ನು ಸುಸಜ್ಜಿತ ಕಟ್ಟಡಕ್ಕೆ ಸ್ಥಳಾಂತರಿಸಬೇಕು ಮತ್ತು ಅಗತ್ಯ ಮೂಲ ಸೌಕರ್ಯಗಳನ್ನು ಕೈಗೊಳ್ಳಬೇಕು.
3) ಗ್ರಾಮದ ಬಸ್‌ನಿಲ್ದಾಣದ ಪಕ್ಕದಲ್ಲಿ ಇರುವ ಶೌಚಾಲಯವನ್ನು ಹೈಟೆಕ್ ಶೌಚಾಲಯವನ್ನಾಗಿ ಮೇಲ್ದರ್ಜೆಗೇರಿಸುವುದು. ಸದರಿ ಶೌಚಾಲಯವು ಶಿಥಿಲಗೊಂಡಿದೆ. ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯ ಇದ್ದರೂ ಬಳಕೆಗೆ ಯೋಗ್ಯವಾಗಿಲ್ಲ.
4) ಗ್ರಾಮದಲ್ಲಿ ತ್ಯಾಜ್ಯನೀರು ಅಲ್ಲಲ್ಲಿ ಮಡುಗಟ್ಟಿ ನಿಂತು ಅನಾರೋಗ್ಯ ವಾತಾವರಣ ನಿರ್ಮಾಣವಾಗಿದೆ. ತ್ಯಾಜ್ಯನೀರು ಸರಾಗ ಹರಿದು ಹೋಗಲು ವ್ಯವಸ್ಥೆ ಮಾಡುವುದರ ಜೊತೆಗೆ ಬ್ಲೀಚಿಂಗ್ ಪೌಡರ್ ಹಾಕುವ ಹಾಗೂ ಸೊಳ್ಳೆಗಳ ಉಪಟಳ ತಡೆಯಲು ಡಿಡಿಟಿ ಸಿಂಪಡಿಸಲು ಕ್ರಮ ಕೈಗೊಳ್ಳಬೇಕು.
5) ಗ್ರಾಮದ ವಿವಿಧ ಕಡೆ ರಸ್ತೆ ಮೇಲೆಯೇ ಕಸದ ರಾಶಿ ಎದ್ದು ಕಾಣುತ್ತಿದೆ. ಸರಕಾರ ಪ್ರತಿ ಗ್ರಾಮಪಂಚಾಯತಿಗೂ ಕಸವಿಲೇವಾರಿ ಘಟಕವನ್ನು ಮಂಜೂರು ಮಾಡಿದ್ದರೂ ಗ್ರಾಮದಲ್ಲಿನ ಕಸ ಸರಿಯಾಗಿ ವಿಲೇವಾರಿಯಾಗುತ್ತಿಲ್ಲ.
6) ಗ್ರಾಮದಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳಿದ್ದು, ಅವರು ಅಭ್ಯಾಸಮಾಡಲು ಸರಿಯಾದ ಕ್ರೀಡಾಂಗಣದ ವ್ಯವಸ್ಥೆ ಇಲ್ಲ. ಗ್ರಾಮ ವ್ಯಾಪ್ತಿಯಲ್ಲಿ ಸುಸಜ್ಜಿತ ಕ್ರೀಡಾಂಗಣವನ್ನು ನಿರ್ಮಿಸಲು ಕ್ರಮ ಕೈಗೊಳ್ಳಬೇಕು.
7) ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸುತ್ತ ಕೊಳಚೆ ಇದೆ. ತೆರವುಗೊಳಿಸಬೇಕು. ಸುತ್ತ ಇರುವ ಹಳೆಯ ಕಟ್ಟಡಗಳನ್ನು ದುರಸ್ತಿಗೊಳಿಸಿ ಮಕ್ಕಳಿಗೆ ಮೈದಾನದ ವ್ಯವಸ್ಥೆ ಮಾಡಬೇಕು.
8) ಗ್ರಾಮದಲ್ಲಿನ ಜಲಜೀವನ್ ಮಿಷನ್ ಕಾಮಗಾರಿ ಕಳಪೆಗುಣಮಟ್ಟದ್ದಾಗಿದೆ. ಕಾಮಗಾರಿ ಅಪೂರ್ಣವಾಗಿದೆ. ಈ ಬಗ್ಗೆ ಪರಿಶೀಲನೆ ನಡೆಸಿ ಎಲ್ಲೆಲ್ಲಿ ನಳಗಳು ಮತ್ತು ಪೈಪ್‌ಲೈನ್ ಅಳವಡಿಸಿಲ್ಲ ಎನ್ನುವುದನ್ನು ಗಮನಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು.
9) ಗ್ರಾಮ ವ್ಯಾಪ್ತಿಯಲ್ಲಿ ಸೋಲಾರ್ ಮತ್ತು ಪವನ ವಿದ್ಯುತ್ ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದು, ಅವರ ಸಿ.ಎಸ್.ಆರ್.ಫಂಡ್ ಸಹಾಯವನ್ನು ಪಡೆದು ಗ್ರಾಮದ ಮುಖ್ಯರಸ್ತೆಗೆ ಬೀದಿ ದೀಪಗಳನ್ನು ಅಳವಡಿಸಬೇಕು. ಮತ್ತು ಸದರಿ ಕಂಪನಿಯವರು ಸ್ಥಳೀಯರಿಗೆ ಆದ್ಯತೆ ನೀಡಿ ಕೆಲಸ ನೀಡಬೇಕು.

**ಕ್ಷೇತ್ರ ಶಿಕ್ಷಣಾಧಿಕಾರಿಗಳು:**

1) ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸುತ್ತ ಕೊಳಚೆ ಇದೆ. ತೆರವುಗೊಳಿಸಬೇಕು. ಸುತ್ತ ಇರುವ ಹಳೆಯ ಕಟ್ಟಡಗಳನ್ನು ದುರಸ್ತಿಗೊಳಿಸಿ ಮಕ್ಕಳಿಗೆ ಮೈದಾನದ ವ್ಯವಸ್ಥೆ ಮಾಡಬೇಕು.
2) ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಇರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.
3) ನಮ್ಮ ಗ್ರಾಮದ ಶಾಲೆಯಲ್ಲಿ ದೈಹಿಕ ಶಿಕ್ಷಕ ಹುದ್ದೆ ಬಹಳ ದಿನಗಳಿಂದ ಖಾಲಿ ಇದ್ದು, ಕೂಡಲೇ ದೈಹಿಕ ಶಿಕ್ಷಕರನ್ನು ನಿಯೋಜನೆ ಮಾಡಬೇಕು.

4) ಗ್ರಾಮಕ್ಕೆ ಸರಕಾರಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ವಸತಿ ಶಾಲೆಯ ಅಗತ್ಯವಿದ್ದು, ಈ ಬಗ್ಗೆ ಸರಕಾರಕ್ಕೆ ಇದೇ ವರ್ಷ ಪ್ರಸ್ತಾವನೆಯನ್ನು ಸಲ್ಲಿಸಬೇಕು.

ಆರೋಗ್ಯ ಇಲಾಖೆ:

1) ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಸ್ವಚ್ಛತೆಯ ಕೊರತೆ ಇದೆ.
2) ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ವೈದ್ಯಾಧಿಕಾರಿಗಳು ಸೇರಿದಂತೆ, ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಕೇಂದ್ರಕ್ಕೆ ಹಾಜರಾಗದೇ, ರೋಗಿಗಳು ಕಾಯಬೇಕಾದ ಪರಿಸ್ಥಿತಿ ಇದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು.
3) ಈ ಆರೋಗ್ಯ ಕೇಂದ್ರ ವ್ಯಾಪ್ತಿಗೆ 26 ಗ್ರಾಮಗಳು ಬರುತ್ತಿದ್ದು, ಸದರಿ ಕೇಂದ್ರಕ್ಕೆ ಒಂದು ಆಂಬ್ಯುಲೆನ್ಸ್ ವ್ಯವಸ್ಥೆಯನ್ನು ಮಾಡಬೇಕು.
4) ಆರೋಗ್ಯ ಕೇಂದ್ರದ ಲ್ಯಾಬ್ ಟೆಕ್ನಿಷಿಯನ್ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ, ರಕ್ತ ಪರೀಕ್ಷೆ ಮತ್ತು ಉಳಿದ ಪರೀಕ್ಷೆಗಳನ್ನು ರೋಗಿಗಳು ಹೊರಗಡೆ ಮಾಡಿಸಿಕೊಂಡು ಬರಬೇಕಾದ ಪರಿಸ್ಥಿತಿ ಇದೆ. ಪ್ರಯೋಗಾಲಯಕ್ಕೆ ಅಗತ್ಯ ಪರಿಕರಗಳನ್ನು ಆರೋಗ್ಯ ಇಲಾಖೆಯಿಂದ ಪೂರೈಸಬೇಕು.
5) ಆರೋಗ್ಯ ಕೇಂದ್ರಕ್ಕೆ ಅಗತ್ಯ ಔಷಧ ಸರಬರಾಜು ಆಗುತ್ತಿಲ್ಲ. ವೈದ್ಯರು ಹೊರಗಡೆ ಔಷಧ ಚೀಟಿಯನ್ನು ಬರೆಯುತ್ತಾರೆ.
6) ಆರೋಗ್ಯ ಕೇಂದ್ರದ ಆವರಣದಲ್ಲಿ ಸಾರ್ವಜನಿಕರಿಗೆ ಶೌಚಾಲಯವನ್ನು ವ್ಯವಸ್ಥೆಗೊಳಿಸಬೇಕು.
7) ಆರೋಗ್ಯ ಕೇಂದ್ರಕ್ಕೆ ಇನ್ನೊಬ್ಬ ವೈದ್ಯಾಧಿಕಾರಿಗಳನ್ನು ನಿಯೋಜಿಸಬೇಕು.
8) ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಂದಿಕೊಂಡು ಇರುವ ವಸತಿ ಗೃಹದಲ್ಲಿ ವೈದ್ಯಾಧಿಕಾರಿ ಇರುತ್ತಿಲ್ಲ. ಇದರಿಂದ ತಡರಾತ್ರಿ ತುರ್ತು ಚಿಕಿತ್ಸೆಯ ಅಗತ್ಯ ಇರುವ ರೋಗಿಗಳಿಗೆ ತೊಂದರೆಯಾಗುತ್ತಿದೆ.

ಜೆಸ್ಕಾಂ ಉಪವಿಭಾಗ ಕುಷ್ಟಗಿ:

1) ಹಿರೇಮನ್ನಾಪೂರ ಗ್ರಾಮಕ್ಕೆ 11ಕೆವಿ ಸ್ಟೇಶನ್ ಮಂಜೂರಾಗಿದ್ದು, ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಬೇಕು.
2) ಗ್ರಾಮದ ಮನೆಗಳ ಮೇಲಿನಿಂದ ವಿದ್ಯುತ್ ತಂತಿಗಳು ಹಾದು ಹೋಗಿವೆ. ಮತ್ತು ಅವುಗಳು ಗಾಳಿಗೆ ನೇತಾಡುತ್ತಿದ್ದು, ಅಪಾಯಕಾರಿ ಸ್ಥಿತಿಯಲ್ಲಿವೆ. ಮನೆಗಳ ಮೇಲೆ ಇರುವ ವಿದ್ಯುತ್ ತಂತಿಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸಬೇಕು.
3) ವಿದ್ಯುತ್ ಕಂಬಗಳು ಶಿಥಿಲಗೊಂಡಿವೆ. ಹೊಸ ಕಂಬಗಳನ್ನು ಅಳವಡಿಸಬೇಕು.
4) ಹಿರೇಮನ್ನಾಪೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದ ಅಸುರಕ್ಷಿತ ಜಾಗದಲ್ಲಿ ಇರುವ ವಿದ್ಯುತ್ ಪರಿವರ್ತಕವನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಬೇಕು.

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಕುಷ್ಟಗಿ:

1. ಹಿರೇಮನ್ನಾಪೂರ ಗ್ರಾಮದಲ್ಲಿ ಜಲಜೀವನ ಮಿಷನ್ ಯೋಜನೆಯಡಿ ನಡೆದಿರುವ ಕಾಮಗಾರಿಗಳು ಅಸಮರ್ಪಕವಾಗಿವೆ. ಅನೇಕ ಕಡೆ ನಲ್ಲಿಗಳನ್ನು ಅಳವಡಿಸಿಲ್ಲ. ಪೈಪ್‌ಲೈನ್ ಕಾಮಗಾರಿಯು ಕಳಪೆಯಾಗಿದ್ದು, ಯೋಜನೆಯಂತೆ ಆಳವಾಗಿ ಪೈಪ್‌ಗಳನ್ನು ಅಳವಡಿಸುವ ಬದಲಿಗೆ ಮೇಲ್ಭಾಗದಲ್ಲಿಯೇ ಅಳವಡಿಸಲಾಗಿದೆ. ಪೈಪ್‌ಲೈನ್ ಅಳವಡಿಕೆಗಾಗಿ ಅಗೆದಿರುವ ರಸ್ತೆಯನ್ನು ಮೂಲ ಸ್ಥಿತಿಗೆ ತಂದಿರುವುದಿಲ್ಲ. ಪೈಪ್‌ಲೈನ್‌ಗೆ ಅಗೆದ ಮಣ್ಣನ್ನು ಮುಚ್ಚಿಲ್ಲ ಮತ್ತು ಸಿಸಿ ರಸ್ತೆ ಹೊಡೆದಿದ್ದು, ದುರಸ್ತಿಗೊಳಿಸಿರುವುದಿಲ್ಲ. ಜಲಜೀವನ ಮಿಷನ್ ಯೋಜನೆಯಡಿ ನಿರಂತರವಾಗಿ ನೀರು ಸರಬರಾಜು ಆಗುತ್ತಿಲ್ಲ. ಪೈಪ್‌ಲೈನ್ ಅಲ್ಲಲ್ಲಿ ಸೋರಿಕೆಯಾಗಿ ಸಂಚಾರಕ್ಕೆ ತೊಂದರೆಯಾಗಿರುವುದಲ್ಲದೇ ರಸ್ತೆಗಳು ಹಾಳಾಗಿವೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು.

ಈ ಮೇಲ್ಕಾಣಿಸಿದ ಬೇಡಿಕೆಗಳನ್ನು ಕೂಡಲೇ ಈಡೇರಿಸಿ, ಗ್ರಾಮದ ಅಭಿವೃದ್ಧಿಗೆ ಕ್ರಮವಹಿಸಬೇಕೆಂದು ಈ ಮೂಲಕ ತಮಗೆ ಮನವಿ ಪತ್ರವನ್ನು ಸಲ್ಲಿಸುತ್ತಿದ್ದೇವೆ.

ತಮ್ಮ ವಿಶ್ವಾಸಿ

ಪರಸಪ್ಪ ಬ.ಅಳ್ಳಳ್ಳಿ
ಅಧ್ಯಕ್ಷರು
ಕರವೇ ಗ್ರಾಮ ಘಟಕ ಹಿರೇಮನ್ನಾಪೂರ

ಆದಪ್ಪ ಎಸ್.ಉಳ್ಳಾಗಡ್ಡಿ — ಗೌರವ ಅಧ್ಯಕ್ಷರು ತಾ.ಘಟಕ
ಪ್ರಕಾಶ ಮನ್ನೇರಾಳ — ಅಧ್ಯಕ್ಷರು ತಾ.ಘಟಕ
ಚನ್ನಪ್ಪ ನಾಲಗಾರ — ಉಪಾಧ್ಯಕ್ಷರು ತಾ.ಘಟಕ
ಎನ್.ಶರಣು ನಾಯಕ — ಸಂಘಟನಾ ಕಾರ್ಯದರ್ಶಿ ತಾ.ಘಟಕ

ಜೆ.ಪಂಪಣ್ಣ ಹಡಪದ — ಗೌರವ ಅಧ್ಯಕ್ಷರು
ಮರಿಯಪ್ಪ ಎನ್.ಮುಳ್ಳೂರು — ಉಪಾಧ್ಯಕ್ಷರು, ಗ್ರಾಮ ಘಟಕ
ಮಂಜುನಾಥ ಕಜ್ಜಿ — ಸಹಕಾರ್ಯದರ್ಶಿ, ಗ್ರಾಮ ಘಟಕ
ಹುಸೇನಸಾಬ ಆರ್.ಕೋಳೂರು — ಪ್ರಧಾನಕಾರ್ಯದರ್ಶಿ ಗ್ರಾಮ ಘಟಕ

ಕಿರಣ ಕನ್ನೂರ — ಕಾರ್ಯದರ್ಶಿ ಗ್ರಾ.ಘ.
ಬಸವರಾಜ ಕತ್ತಿ — ಸಂಚಾಲಕರು
ಭೀಮೇಶ ಎಂ.ವಡ್ಡರ — ಉಪಕಾರ್ಯದರ್ಶಿ
ಮಹಾಂತೇಶ ಗೋನಾಳ